# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ಆಕಸ್ಮಿಕ ಧನಲಾಭ. ಅರ್ಧದಲ್ಲಿ ನಿಂತ ಕಟ್ಟಡ ಮನೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು. ಚಿಕ್ಕ ಪ್ರವಾಸ. ಉದ್ಯೋಗ ವ್ಯವಹಾರಗಳಲ್ಲಿ ಉತ್ತಮ ಲಾಭ. ಹೊಸ ಸ್ನೇಹಿತರು ದೊರೆಯುವರು. ಒಟ್ಟಾರೆಯಾಗಿ ಸಂತಸದ ವಾತಾವರಣ. ಶುಭ: 14,19,29. ಅಶುಭ: 11,16,20.

**ವೃಷಭ:** ಮನೆಯಲ್ಲಿ ವಿವಾದಗಳು. ಬಂಧುಗಳಿಂದ ಕಿರಿಕಿರಿ. ಅನವಶ್ಯಕ ಖರ್ಚು. ಉನ್ನತ ಶಿಕ್ಷಣ ಮಾಡುತ್ತಿರುವವರಿಗೆ ಉತ್ತಮ ಪ್ರಗತಿ ಇದೆ. ವ್ಯಾಪಾರಸ್ಥರಿಗೆ ಲಾಭ. ಮಂಗಳ ಕಾರ್ಯದಲ್ಲಿ ಭಾಗಿಯಾಗುವಿರಿ ಅಥವಾ ನೀವೇ ನೆರವೇರಿಸುವಿರಿ. ಶುಭ: 5,11,23. ಅಶುಭ: 7,16,22.





**ಮಿಥುನ:** ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಸ್ವತಂತ್ರ ಉದ್ಯೋಗದಲ್ಲಿ ಉತ್ತಮ ಲಾಭ. ಆಸ್ತಿ ಖರೀದಿ ಬಗ್ಗೆ ಚಿಂತನೆ, ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ. ಶತ್ರುಗಳು ಹಿಂದೆ ಸರಿಯುವರು. ಸರಕಾರಿ ಕೆಲಸ ಶೀಘ್ರ ಆಗುವುದು. ಶುಭ. 10,14, 22. ಅಶುಭ: 12,18,27.

**ಕರ್ಕ:** ಪಾಲುದಾರಿಕೆ ಉದ್ಯೋಗದಲ್ಲಿ ತೊಂದರೆ, ಭಿನ್ನಾಭಿಪ್ರಾಯ ತಲೆದೋರಬಹುದು. ವಿಚಿತ್ರ ಆರ್ಥಿಕ ಮುಗ್ಗಟ್ಟಿನ ತಿಂಗಳು ಇದು. ಸ್ವತಂತ್ರ ವೃತ್ತಿಪರರಿಗೆ ಉತ್ತಮ ಲಾಭ. ಸರ್ಕಾರಿ ಉದ್ಯೋಗಿಗಳಿಗೆ ಅನಿರೀಕ್ಷಿತ ವರ್ಗಾವಣೆ. ಸೋದರರಿಂದ ಶುಭಸುದ್ದಿ. ಶುಭ: 11,16,24. ಅಶುಭ: 10,14,23.





**ಸಿಂಹ:** ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಪ್ರಗತಿ. ನಿಮ್ಮ ಆರೋಗ್ಯವು ಉತ್ತಮವಾಗಿ ಇರುತ್ತದೆ. ಹೆಚ್ಚು ಉತ್ಸಾಹ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ತಿಂಗಳ ಕೊನೆಗೆ ವ್ಯಾಪಾರ, ವ್ಯವಹಾರ ಲಾಭದಾಯಕವಾಗಿ ಇರುತ್ತದೆ. ಶುಭ: 16,20,28. ಅಶುಭ: 13,19,26.

**ಕನ್ಯಾ:** ಯುವಜನರಿಗೆ ಉತ್ತಮ ಸಮಯ. ಹೊಸ ಯೋಜನೆ ರೂಪಿಸಿದ್ದರೆ ಸಾಕಾರಗೊಳ್ಳುತ್ತದೆ. ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ. ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ಶುಭ: 12,16,25. ಅಶುಭ: 11,18,22.





**ತುಲಾ:** ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ಕುಟುಂಬ ಸೌಖ್ಯ. ಒಟ್ಟಾರೆಯಾಗಿ ಶುಭ. ಶುಭ: 12,18,24. ಅಶುಭ: 13,19,27.

**ವೃಶ್ಚಿಕ:** ಹಲವು ಸವಾಲುಗಳು ಏಕಕಾಲಕ್ಕೆ ಎದುರಾಗುತ್ತದೆ. ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ತಿಂಗಳ ಮಧ್ಯಭಾಗದಲ್ಲಿ ವ್ಯಾಪಾರ, ಉದ್ಯಮ ವಿಸ್ತರಣೆಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಹಣಕಾಸಿನ ವೆಚ್ಚ ಹೆಚ್ಚಾಗಲಿದೆ. ಶುಭ: 10,14,22. ಅಶುಭ: 12,16,23.





**ಧನು:** ವ್ಯಾಪಾರ ಉದ್ಯಮ ನಡೆಸುತ್ತಿರುವವರು ಈಗ ನೀಡುತ್ತಿರುವ ಸೇವೆಗಳ ಜತೆಗೆ ಇನ್ನಷ್ಟು ಸೇರ್ಪಡೆ ಮಾಡಲಿದ್ದೀರಿ. ಬಿಡುವಿಲ್ಲದ ಉದ್ಯೋಗದ ಮಧ್ಯೆಯೂ ಕುಟುಂಬ ಜೀವನಕ್ಕೆ ಹೆಚ್ಚಿನ ಸಮಯ ನೀಡಬೇಕಾಗುತ್ತದೆ. ನೆಗಡಿ, ಕೆಮ್ಮು, ತಲೆನೋವು ಕಾಡಬಹುದು. ಶುಭ: 15,18,29. ಅಶುಭ:12,16,27.

**ಮಕರ:** ಮನೆಗೆ ಹಳೆಯ ಮಿತ್ರರ ಆಗಮನ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಉತ್ತಮ ಲಾಭ ಪಡೆಯುವ ಅವಕಾಶ ಇದೆ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಶಸ್ಸು ಪಡೆಯುವ ಅವಕಾಶಗಳು ದೊರೆಯಲಿವೆ. ಶುಭ: 19,22,29. ಅಶುಭ: 12,16,21.





**ಕುಂಭ:** ಹೊಸ ಉತ್ಸಾಹದಿಂದ ಪುಟಿಯಲಿದ್ದೀರಿ. ಕೆಲವು ಅನಿರೀಕ್ಷಿತ ಖರ್ಚುಗಳಿಗಾಗಿ ಹಣ ಮೀಸಲಿಡಲು ಆಲೋಚನೆ ಮಾಡುತ್ತೀರಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಏರುಪೇರುಗಳಾಗಬಹುದು. ಆಸ್ತಿ ಹಂಚಿಕೆ ವಿಚಾರದಲ್ಲಿ ಸೋದರ–ಸೋದರಿಯರ ಜತೆ ಸಂಘರ್ಷ ಸಾಧ್ಯತೆ. ಶುಭ: 15,18,26. ಅಶುಭ: 14,20,28.

**ಮೀನ:** ಉದ್ಯಮಿಗಳು ವ್ಯಾಪಾರಿಗಳು ಬೇಡಿಕೆಗೆ ತಕ್ಕಂತೆ ಪೂರೈಕೆ ಒದಗಿಸಲು ಸಿದ್ಧತೆ ಮಾಡಿಕೊಳ್ಳುತ್ತೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಸಂಬಂಧಗಳು ಸುಮಧುರವಾಗಿರುತ್ತವೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜತೆಗೆ ಸಿಟ್ಟಾಗಲಿದ್ದೀರಿ. ಶುಭ: 16,20,27. ಅಶುಭ: 12,22,29.

